# ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು ಇವರ ನಡವಳಿಗಳು

ವಿಷಯ: 2019-20ನೇ ಸಾಲಿನಲ್ಲಿ "ಬಿದಾಯಿ" ಯೋಜನೆಯಡಿ One Time Settlement ಮಾದರಿಯಂತೆ **ಬಾಗಲಕೋಟೆ ಜಿಲ್ಲೆಯಲ್ಲಿ** ಬಾಕಿ ಇರುವ ಅರ್ಜಿಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲುಡಿ 134 ಎಂಡಿಎಸ್ 2019, ದಿ: 26.04.2019.
2) ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 439 ಬಿಆರ್‌ಎಸ್ 2019 ದಿನಾಂಕ: 19.03.2020.
3) ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯುಡಿ 135 ಎಂಡಿಎಸ್ 2020, ದಿ: 20.03.2020.

>>><<<

ಪ್ರಸ್ತಾವನೆ:-

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಯೋಜನೆಗಳನ್ನು 2018-19ನೇ ಸಾಲಿನಲ್ಲಿ ಚಾಲ್ತಿಯಲ್ಲಿದ್ದ ಯೋಜನಾ ಕಾರ್ಯಕ್ರಮಗಳನ್ನು 2019-20ನೇ ಆರ್ಥಿಕ ಸಾಲಿನಲ್ಲಿ ಮುಂದುವರೆಸಲು ಉಲ್ಲೇಖ (1)ರಲ್ಲಿ ಆದೇಶ ಹೊರಡಿಸಲಾಗಿದೆ. ಅದರಲ್ಲಿ "ಬಿದಾಯಿ" ಕಾರ್ಯಕ್ರಮವು ಸಹ ಒಂದಾಗಿರುತ್ತದೆ.

ಉಲ್ಲೇಖ (2)ರ ಸರ್ಕಾರದ ಆದೇಶದಲ್ಲಿ One Time Settlement ತರಹ ಬಿದಾಯಿ ಯೋಜನೆಗೆ ಲೆಕ್ಕಶೀರ್ಷಿಕೆ 2225-03-800-0-07-059- ಇತರೆ ಖರ್ಚುಗಳು ಅಡಿಯಲ್ಲಿ ರೂ. 8479.00 ಲಕ್ಷಗಳು ಒಟ್ಟು ರೂ. 8479.00 ಲಕ್ಷ (Rupees eight thousand four hundred seventy-nine lakh only) ಗಳನ್ನು ಪುನರ್ ವಿನಿಯೋಗದ ಮೂಲಕ ಒದಗಿಸಲು ಮಂಜೂರಾತಿ ನೀಡಿದೆ.

ಉಲ್ಲೇಖ (3)ರ ಸರ್ಕಾರದ ಆದೇಶದಲ್ಲಿ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದ ಬಿದಾಯಿ ಯೋಜನೆಯಡಿ ಬಾಕಿ ಇರುವ ಅರ್ಹ 33,916 ಅರ್ಜಿದಾರರಿಗೆ ನಿಗದಿತ ರೂ. 50,000/-ಗಳ ಬದಲಾಗಿ ರೂ. 25,000/-ಗಳನ್ನು ಒಂದು ಬಾರಿಗೆ (One Time Settlement) ಮಾದರಿಯಂತೆ ಬಿದಾಯಿ ಯೋಜನೆಯ ಲೆಕ್ಕಶೀರ್ಷಿಕೆ 2225-03-800-0-07 (059) ಅಡಿಯಲ್ಲಿ 2019-20ನೇ ಸಾಲಿನಲ್ಲಿ ಲಭ್ಯವಿರುವ ರೂ. 8479.00 ಲಕ್ಷಗಳ ಮಿತಿಗೊಳಪಟ್ಟು Beneficiary Management Systems ರಡಿ ಖಜಾನೆ-2ರ ಮುಖಾಂತರ 33,916 ಫಲಾನುಭವಿಗಳಿಗೆ ಸಹಾಯಧನ ನೀಡಲು ಸರ್ಕಾರದ ಮಂಜೂರಾತಿ ನೀಡಿ ಆದೇಶ ಹೊರಡಿಸಲಾಗಿದೆ.

ಅದರಂತೆ, ಬಾಗಲಕೋಟೆ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರು ಸಲ್ಲಿಸಿರುವ ಬಾಕಿ ಅರ್ಜಿಗಳಿಗೆ ತಲಾ ರೂ. 25,000/-ಗಳಂತೆ 900 ಫಲಾನುಭವಿಗಳಿಗೆ ರೂ. 225.00 ಲಕ್ಷ (ರೂ. ಎರಡು ಕೋಟಿ ಇಪ್ಪತ್ತೈದು ಲಕ್ಷಗಳು ಮಾತ್ರ)ಗಳನ್ನು Beneficiary Management Systems ರಡಿ ಖಜಾನೆ-2ರ ಮುಖಾಂತರ ಪಾವತಿಸಲು ಈ ಕೆಳಕಂಡಂತೆ ಈ ಆದೇಶ

## ಆ ದೇ ಶ

**ಸಂಖ್ಯೆ: ಅಸಂನಿ/ಬಿದಾಯಿ/ಬಾಗ-03/ಸಿಆರ್-31/2019-20** ದಿನಾಂಕ: 23-03-2020

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಉಲ್ಲೇಖ (3)ರ ಸರ್ಕಾರದ ಆದೇಶದನ್ವಯ ಬಿದಾಯಿ ಯೋಜನೆಯಡಿ ಬಾಕಿ ಇರುವ ಅರ್ಜಿದಾರರಿಗೆ ನಿಗದಿತ ರೂ. 50,000/-ಗಳ ಬದಲಾಗಿ ರೂ. 25,000/-ಗಳನ್ನು ಒಂದು ಬಾರಿಗೆ (One Time Settlement) ಮಾದರಿಯಂತೆ

ಬಿದಾಯಿ ಯೋಜನೆಯ ಲೆಕ್ಕಶೀರ್ಷಿಕೆ 2225-03-800-0-07 (059) ಅಡಿಯಲ್ಲಿ 2019-20ನೇ ಸಾಲಿನಲ್ಲಿ ಲಭ್ಯವಿರುವ ರೂ. 8479.00 ಲಕ್ಷಗಳ ಮಿತಿಗೊಳಪಟ್ಟು Beneficiary Management Systems ರಡಿ ಖಜಾನೆ-2ರ ಮುಖಾಂತರ 33,916 ಫಲಾನುಭವಿಗಳಿಗೆ ಸಹಾಯಧನ ನೀಡಲು ಸರ್ಕಾರದ ಮಂಜೂರಾತಿ ನೀಡಿ ಆದೇಶ ಹೊರಡಿಸಲಾಗಿದೆ.

ಅದರಂತೆ, ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, **ಬಾಗಲಕೋಟೆ ಜಿಲ್ಲೆ** ರವರು ಶಿಫಾರಸ್ಸು ಮಾಡಿರುವ ಬಾಕಿ ಅರ್ಜಿಗಳಿಗೆ ತಲಾ ರೂ. 25,000/-ಗಳಂತೆ ಅನುಬಂಧದಲ್ಲಿ ಲಗತ್ತಿಸಿರುವ 900 ಫಲಾನುಭವಿಗಳಿಗೆ ರೂ. 225.00 ಲಕ್ಷ (ರೂ. ಎರಡು ಕೋಟಿ ಇಪ್ಪತ್ತೈದು ಲಕ್ಷಗಳು ಮಾತ್ರ)ಗಳನ್ನು Beneficiary Management Systems ರಡಿ ಖಜಾನೆ-2ರ ಮುಖಾಂತರ ಪಾವತಿಸಲು ಮಂಜೂರಾತಿ ನೀಡಿ ಅನುದಾನ ಬಿಡುಗಡೆ ಮಾಡಿದೆ.

ಪ್ರಸ್ತುತ ಬಿಡುಗಡೆ ಮಾಡಿರುವ ಮೊತ್ತವನ್ನು ಲೆಕ್ಕಶೀರ್ಷಿಕೆ 2225-03-800-0-07 ಆಬ್ಜೆಕ್ಟ್ ಕೋಡ್ 059 ಬಿದಾಯಿ ಯೋಜನೆ ರಾಜ್ಯವಲಯ ಯೋಜನೆಯಡಿ 2019-20ರಲ್ಲಿ ಭರಿಸುವುದು.

ನಿರ್ದೇಶಕರು,
ಅಲ್ಪಸಂಖ್ಯಾತರ ನಿರ್ದೇಶನಾಲಯ,
ಬೆಂಗಳೂರು.

**ಪ್ರತಿಯನ್ನು:-**

1. ಕರ್ನಾಟಕ ಮಹಾಲೇಖಪಾಲರು, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು.
3. ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವೆಚ್ಚ-3, ಬೆಂಗಳೂರು.
4. ಜಿಲ್ಲಾಧಿಕಾರಿಗಳು, ಬಾಗಲಕೋಟೆಜಿಲ್ಲೆ.
5. ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, **ಬಾಗಲಕೋಟೆ** ಜಿಲ್ಲೆ ರವರಿಗೆ ಮಾಹಿತಿಗಾಗಿ ಹಾಗೂ ಈ ಅರ್ಜಿಗಳ ಬಗ್ಗೆ ಸಾರ್ವಜನಿಕರು/ಲೆಕ್ಕ ಪರಿಶೋಧಕರು ಮಾಹಿತಿಯನ್ನು ಕೋರಿದ್ದಲ್ಲಿ ನೇರವಾಗಿ ಉತ್ತರಿಸುವುದು.
6. ಲೆಕ್ಕ ಪತ್ರ ಶಾಖೆ.
7. ಕಛೇರಿ ಪ್ರತಿ.
8. ಹೆಚ್ಚುವರಿ ಪ್ರತಿ.